ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 118 ಪಿಆರ್‌ಜೆ 2023

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 09-11-2023

## ಸುತ್ತೋಲೆ

ವಿಷಯ: IPGRS ತಂತ್ರಾಂಶದಲ್ಲಿ ದಾಖಲಾದ ಕುಂದುಕೊರತೆ /ಮನವಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದನ್ನು ಮೇಲ್ವಿಚಾರಣೆ ಮಾಡಲು ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿ (Public Grievance Management Officer-PGMO) ಗಳನ್ನು ನೇಮಕಾತಿ ಮಾಡುವ ಕುರಿತು.

***

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 29 ಪಿಆರ್‌ಜೆ 2020, ದಿನಾಂಕ: 09-08-2021 ರಲ್ಲಿ ಪ್ರತಿಯೊಂದು ಸರ್ಕಾರಿ ಕಛೇರಿಗಳಲ್ಲಿ ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿ (Public Grievance Management Officer – PGMO) ಯನ್ನು ನೇಮಿಸಿ, ಅವರ ವಿವರಗಳನ್ನು ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ಜಾಲತಾಣದಲ್ಲಿ ಪ್ರಕಟಿಸುವಂತೆ ಮತ್ತು ಪ್ರತಿದಿನವೂ ಸಂಬಂಧಪಟ್ಟ ಕಛೇರಿಗಳಲ್ಲಿ ಸ್ವೀಕರಿಸಿದ ವಿಲೇಯಾದ ಹಾಗೂ ಬಾಕಿ ಇರುವ ಸಾರ್ವಜನಿಕ ದೂರುಗಳ ಅಂಕಿ-ಅಂಶಗಳನ್ನು ಪ್ರಕಟಿಸುವಂತೆ ಆದೇಶಿಸಲಾಗಿದೆ.

ಸರ್ಕಾರದ ಆದೇಶದನ್ವಯ ಹಲವಾರು ಇಲಾಖೆಗಳು ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿಯನ್ನು ನೇಮಿಸಿ, ವಿವರಗಳನ್ನು ಸೂಚನಾ ಫಲಕದಲ್ಲಿ ಮತ್ತು ಜಾಲತಾಣದಲ್ಲಿ ಪ್ರಕಟಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಆದುದರಿಂದ ಸರ್ಕಾರದ ಎಲ್ಲಾ ಇಲಾಖೆಗಳು / ನಿಗಮ / ಮಂಡಳಿ / ಸ್ವಾಯತ್ತ ಸಂಸ್ಥೆಗಳು ಸಾರ್ವಜನಿಕ ಕುಂದುಕೊರತೆ/ಮನವಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಈ ಕೆಳಕಂಡಂತೆ ಕ್ರಮಕೈಗೊಳ್ಳುವಂತೆ ಸೂಚಿಸಲಾಗಿದೆ.

ಸಚಿವಾಲಯದ ಪ್ರತಿಯೊಂದು ಇಲಾಖೆಯಲ್ಲಿಯೂ IPGRS ತಂತ್ರಾಂಶದಲ್ಲಿ ದಾಖಲಾದ ಕುಂದುಕೊರತೆ/ಮನವಿಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದನ್ನು ಖಾತ್ರಿಪಡಿಸಿಕೊಳ್ಳಲು ಸರ್ಕಾರದ ಉಪ ಕಾರ್ಯದರ್ಶಿ ಅಥವಾ ಮೇಲ್ಪಟ್ಟದ ಅಧಿಕಾರಿಗಳನ್ನು ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿ (Public Grievance Management Officer – PGMO) ಗಳೆಂದು ನೇಮಿಸುವುದು;

ಪ್ರತಿಯೊಂದು ಜಿಲ್ಲೆಯಲ್ಲಿಯೂ IPGRS ತಂತ್ರಾಂಶದಲ್ಲಿ ದಾಖಲಾದ ಕುಂದುಕೊರತೆಗಳನ್ನು ಶೀಘ್ರವಾಗಿ ವಿಲೇವಾರಿ ಮಾಡುವುದನ್ನು ಜಿಲ್ಲಾಮಟ್ಟದಲ್ಲಿ ಮೇಲ್ವಿಚಾರಣೆ ಮಾಡಲು ಅಪರ ಜಿಲ್ಲಾಧಿಕಾರಿಗಳನ್ನು PGMO ಅಧಿಕಾರಿಗಳೆಂದು ನೇಮಿಸುವುದು;

ಕ್ಷೇತ್ರ ಇಲಾಖೆಗಳಲ್ಲಿ ಜಂಟಿ ಆಯುಕ್ತರು ಅಥವಾ ಜಂಟಿ ನಿರ್ದೇಶಕರ ಹುದ್ದೆಗಿಂತ ಕಡಿಮೆ ಇಲ್ಲದ ಅಧಿಕಾರಿಗಳನ್ನು ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿ (Public Grievance Management Officer – PGMO) ಗಳೆಂದು ನೇಮಿಸುವುದು;



Generated from eOffice by BHARATHI DEVI M, CEG-PM(BDM), PROJECT MANAGER, dparegovsec on 15/11/2023 12:45 PM

ಎಲ್ಲಾ ನಿಗಮ / ಮಂಡಳಿ / ಸ್ವಾಯತ್ತಸಂಸ್ಥೆಗಳಲ್ಲಿ ಗ್ರೂಪ್-ಬಿ ದರ್ಜೆಯ ಹುದ್ದೆಗಿಂತ ಕಡಿಮೆ ಇಲ್ಲದ ಅಧಿಕಾರಿಗಳನ್ನು ಸಾರ್ವಜನಿಕ ಕುಂದುಕೊರತೆ ನಿರ್ವಹಣಾಧಿಕಾರಿ (Public Grievance Management Officer – PGMO) ಗಳೆಂದು ನೇಮಿಸುವುದು;

ಮೇಲ್ಕಾಣಿಸಿದ ಎಲ್ಲಾ ಸಾರ್ವಜನಿಕ ಕುಂದುಕೊರತೆ ನಿರ್ವಾಹಣಾಧಿಕಾರಿ (Public Grievance Management Officer – PGMO) ಗಳು ಪ್ರತಿವಾರ LMF ಗಳ ಸಭೆ ನಡೆಸಿ ಸಾರ್ವಜನಿಕ ಕುಂದುಕೊರತೆಗಳನ್ನು ವಿಲೇವಾರಿ ಮಾಡಲು ಕ್ರಮ ತೆಗೆದುಕೊಳ್ಳುವುದು;

ಪ್ರತಿಯೊಂದು ಇಲಾಖೆ / ನಿಗಮ / ಮಂಡಳಿ / ಸ್ವಾಯತ್ತಸಂಸ್ಥೆಗಳಲ್ಲಿ ನೇಮಕವಾದಂತಹ PGMO ಗಳು ವರ್ಗಾವಣೆ, ಮುಂಬಡ್ತಿ ಅಥವಾ ವಯೋನಿವೃತ್ತಿ ಹೊಂದಿದಾಗ ಸದರಿ ಜಾಗಕ್ಕೆ ನೇಮಕವಾದ ಅಧಿಕಾರಿಗಳೇ PGMO ಗಳಾಗುತ್ತಾರೆ ಮತ್ತು ಅಧಿಕಾರಿಗಳು ಬದಲಾವಣೆಯಾದ ಮಾಹಿತಿಯನ್ನು ಜಾಲತಾಣದಲ್ಲಿ ಪ್ರದರ್ಶಿಸುವುದು ಹಾಗೂ ಯೋಜನಾ ನಿರ್ದೇಶಕರು, IPGRS, ಇ-ಆಡಳಿತ ಕೇಂದ್ರ ಇವರಿಗೂ ಸಹ ಕಳುಹಿಸಿಕೊಡತಕ್ಕದ್ದು.

(ಡಾ. ಶಾಲಿನಿ ರಜನೀಶ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, (ಇ-ಆಡಳಿತ)

ಇವರಿಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ, ವಿಧಾನಸೌಧ, ವಿಕಾಸಸೌಧ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು / ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ – ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತಕೇಂದ್ರ ಇವರ ಮುಖಾಂತರ.
5. ರಾಜ್ಯದ ಎಲ್ಲಾ ಇಲಾಖಾ ಮುಖ್ಯಸ್ಥರುಗಳು – ಸಂಬಂಧಪಟ್ಟ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಮುಖಾಂತರ.
6. ರಾಜ್ಯದ ನಿಗಮ / ಮಂಡಳಿ / ಸ್ವಾಯತ್ತಸಂಸ್ಥೆಗಳು –ಸಂಬಂಧಪಟ್ಟ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿ ಇವರ ಮುಖಾಂತರ
7. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಇ-ಆಫೀಸ್ Dash Boardನಲ್ಲಿ ಪ್ರಕಟಿಸಲು
9. ಇಲಾಖಾವೆಬ್ ಸೈಟ್ ನಲ್ಲಿ ಪ್ರಕಟಿಸಲು
10. ಶಾಖಾ ರಕ್ಷ ಕಡತ.



Generated from eOffice by BHARATHI DEVI M, CEG-PM(BDM), PROJECT MANAGER, dparegovsec on 15/11/2023 12:45 PM